ಮದುವೆಯಾಗೋದು ಸಾಧ್ಯವೇ ಇಲ್ಲ, ಅವಳು ಮಾತ್ರ ತನಗೆ ಹೇಳಿಮಾಡಿಸಿದ ಹುಡುಗಿ ಅಂತ ಭೀಷ್ಮನಂತೆ ಘೋಷಿಸಿಬಿಟ್ಟ. ತನಗಾಗಲಿ ಗಿರಿಜಳಿಗಾಗಲಿ ಏನು ಹೇಳಲೂ ಉಳಿಸಲಿಲ್ಲ. ಅದಾಗಿ ತಿಂಗಳಲ್ಲಿ ಅವನ ಫ್ಲ್ಯಾಟಿನಲ್ಲೇ ಕಿಶನ್‌ಚಂದ್ ಭಾಟಿಯಾ ಮತ್ತವರ ಹೆಂಡತಿಯನ್ನು ಭೆಟ್ಟಿಯಾಗಿದ್ದರು. ನಂತರ ಅವರು ಹಳ್ಳಿಗೂ ಬಂದರು. ಒಳ್ಳೆಯ ಸುಸಂಸ್ಕೃತ ಸಭ್ಯ ಜನ. ಬಂದಾಗೊಮ್ಮೆ ಏನೇನೋ ಉಡುಗೊರೆ. ತಮಗೂ ಅವರ ಕಡೆಯವರನ್ನ ಹೀಗೆ ಉಪಚರಿಸಲು ಸಾಧ್ಯವೇ ಅಂತ ಯೋಚನೆಯಾಗುವ ಮಟ್ಟಿಗೆ! ಮದುವೆ ಹರಿಯಾಣಾದ ರೋಹಟಕ್‌ನಲ್ಲಿ ಅವರ ಪದ್ಧತಿಯಂತೆ ಆಗಿತ್ತು. ತಮ್ಮನ್ನೆಲ್ಲ ವಿಮಾನದಲ್ಲಿ ಕರೆಸಿಕೊಂಡು ಹವಾನಿಯಂತ್ರಿತ ಕೊಠಡಿಯಲ್ಲಿ ವಸತಿಯೇರ್ಪಡಿಸಿ ಎಷ್ಟೆಲ್ಲ ಉಪಚರಿಸಿದ್ದರು. ಹತ್ತಾರುಬಗೆಯ ಸಿಹಿ, ಖಾರ ಭಕ್ಷ್ಯಗಳು. ಹೋದಲ್ಲಿ ನಿಂತಲ್ಲಿ ವಿಚಾರಿಸಿಕೊಂಡು ವೈಭವದಿಂದ ಮದುವೆಮಾಡಿ ಕೊಟ್ಟರು. ಮಗಳಿಗೆ ಜೇಪಿ ನಗರದಲ್ಲಿ ಮೂರು ಬೆಡ್‌ರೂಮಿನ ಫ್ಲ್ಯಾಟು ಉಡುಗೊರೆಯಾಗಿ ಕೊಟ್ಟು, ತಾನು ಮಗನಿಗೆ ಎಮ್.ಟೆಕ್ ಓದಿಸಿದ್ದು ಏನೇನೂ ಅಲ್ಲ ಎಂಬಾಲೋಚನೆಯೂ ಸುಳಿದು ಹೋಗಿತ್ತು. ಹನಿಮೂನಿಗಂತ ಪೋರ್ತುಗಾಲಿಗೆ ಹೋಗಿಬಂದವರು ಹಳ್ಳಿಯಲ್ಲೂ ಒಂದುವಾರ ಕಾಡು, ಹಳ್ಳಕೊಳ್ಳಗಳಲ್ಲಿ ಅಲೆದಾಡಿಕೊಂಡಿದ್ದರು. ಸದಾ ಜೋಡಿಯಾಗಿ ಅಲೆಯುವ ದಂಪತಿಯನ್ನು ಕಂಡು, ಈ ಮದುವೆ ವಿರೋಧಿಸಿ ತಪ್ಪು ಮಾಡಿಬಿಡುತ್ತಿದ್ದೆ ಎಂಬ ತೃಪ್ತಿಯಲ್ಲಿ ಅವರಿಗೆ 'ಹಕ್ಕಿಟೆಕ್ಕಿ'ಗಳು ಅಂತ ಹೆಸರಿಟ್ಟಿದ್ದರು. ತೋಟದ ತಲೆ ಮರದ ಹುಳಿ ಮಾವಿನಕಾಯಿ ಅಪ್ಪೆಹುಳಿಯನ್ನ ಬಾಯಿತುಂಬಾ ತುಂಬಿಕೊಂಡು ಆ ಹುಡುಗಿ ಏಕ ಕಾಲದಲ್ಲಿ ಮೂಡಿಸಿದ ಅಚ್ಚರಿ, ಗಾಬರಿ, ಸಂಭ್ರಮ ಈಗಲು ಕಣ್ಣಿಗೆ ಕಟ್ಟುತ್ತದೆ. 'ನೀರುನೀರಾಗಿದ್ದು ಕಂಡು ಏನೋ ಅಂದ್ಕೊಂಡೆ. ಅಬ್ಬಾ... ಜೋರಾಗಿದೆ ಇದು!' ಉದ್ಗರಿಸಿ ಕೈಕೊಡವುತ್ತ ಕುಣಿದಿದ್ದಳು. ತನ್ನನ್ನ ಅಪ್ಪಾ ಅಂತಲೆ ಸಂಬೋಧಿಸುತ್ತಿದ್ದಳು. ಆಮೇಲೊಮ್ಮೆ ಅವಳ ಅಪ್ಪ ಅಮ್ಮ ಬಂದವರು ಶಿರಸಿಯ ಹೋಟೆಲಲ್ಲಿ ಉಳಿದಿದ್ದರು. ಮಗಳಮನೆಯಲ್ಲಿ ಊಟ ಮಾಡುವುದಿಲ್ಲವಂತೆ; ಅದು ಸಂಪ್ರದಾಯವಂತೆ. ಆದರೆ ಈ ಸುಂದರ ಸ್ವಪ್ನಗಳಿಗೆಲ್ಲಾ ಏನಾಗುತದೋ. ಕಾಗೆಯೋ ನಾಯಿಯೋ ಕೂಗಿ ಎಚ್ಚರಾಗಿ ಮುಗಿದೇಹೋಗುತ್ತದಲ್ಲ ಅನಿಸಿ ತಲೆ ಕೊಡವಿದರು. ರೈಲು ಆಗಲೆ ತುಮಕೂರು ಸಮೀಪ ಹೋಗುತ್ತಿತ್ತು. ಕಾಮತರು ಮೊಬೈಲಿನಲ್ಲಿ ಏನೋ ಲೆಕ್ಕ ಮಾಡುತ್ತಿದ್ದರು.

'ಒಂದುವರ್ಷ ಎಲ್ಲಾ ಎಷ್ಟು ಚಂದವಾಗಿತ್ತಲ್ಲೊ? ನೀವೇ ಮೆಚ್ಚಿ ಆರಿಸಿಕೊಂಡಿದ್ದು. ಈಗ ಅಂತದ್ದೇನು ಆಗಿಹೋಯ್ತು?'

'ಸೆನ್ಸೇಶನಲ್ ರೆಸ್ಪಾನ್ಸ್ ಹೊಂದಲ್ಲ ಅಪ್ಪಯ್ಯ, ಅದೆಲ್ಲ ನಿಮಗೆ ಅರ್ಥವಾಗೋದಿಲ್ಲ' ಅಂದ ಮುಖ ಗಂಟುಹಾಕಿ.

'ಮದುವೆಗೆ ಮೊದಲು ವರ್ಷಗಟ್ಟಲೆ ಪರಿಚಯವಿತ್ತಲ್ಲೊ! ಆಗಿಲ್ಲದ ಸೆನ್ಸೇಶನ್ನು, ಮಣ್ಣು ಮಶಿ ಕೊರತೆ ಈಗ ಭೂಮಿ ಒಡಕೊಂಡು ಬಂತಾ ಹೇಗೆ?' ಕೆರಳಿ ಕೇಳಿದರು.

'ಮದುವೆಯಾದಮೇಲೆ ಗೊತ್ತಾಗತಾ ಹೋಗ್ತದಪ್ಪಾ. ಈಗೇನು? ನಿಮ್ಮ ಕಾಲದವ್ರ ಹಾಗೆ ಯಾವ್ದೋ ಒಂದು ಶಾಲು ಅಂತ ಹೆಗಲಮೇಲೆ ಹಾಕ್ಕೊಂಡು ಸಂತೇಲಿ ತಿರುಗಾಡಕ್ಕಾಗೋದಿಲ್ಲ. ನಂಗೆ ಅವಳಿಗೆ ಸರಿಹೊಂದಲ್ಲ ಅಷ್ಟೆ' ಮತ್ತೆ ಮಾತು ಬೇಡ ಅನ್ನುವಂತೆ ಹೊರಹೋಗಿದ್ದ. ಅಂತದೇನೂ ಆತಂಕವಿಲ್ಲದೆ ಅಪ್ಪಾ ಅಂತಲೆ ಉಪಚರಿಸಿದ್ದಳು ಸೊಸೆ. ಈಗಿನವರಿಗೆ ಎಲ್ಲಾ ಹುಡುಗಾಟಿಕೆಯಾ ಅಂತ ಕರುಳು ಕಿವಿಚಿತ್ತು. ತಪ್ಪಿಲ್ಲವಾದರೂ ಅಪರಾಧಿ ಪ್ರಜ್ಞೆಯಿಂದ ಕುಗ್ಗಿಹೋದರು. 'ಆ ತಿರುಪತಿಯ ಹುಡುಗಿ ಜೊತೆ, ಅದೇನೋ ಅಂದೆಯಲ್ಲ, ಅದೆ ಆ ಸೆನ್ಸೇಶನ್ನು,